**MVC No. 22/2024**
**ಪಿ.ಡಬ್ಲೂ** –1

**ದಿನಾಂಕಃ** 17.03.2026 **ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

1. ಆಸ್ಪತ್ರೆಯ ಬಿಡುಗಡೆ ಪತ್ರ ನಿಪಿ 16 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲು 2 ನೇ ಎದುರುದಾರ ಪರ ವಕೀಲರಿಂದಃ**

**2.** ನಾನು ಎಸ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ಅಪಘಾತ ದಿನದಂದು ನಾನು ಚಾಲನೆ ಮಾಡುತ್ತಿದ್ದ ಬೈಕ್ ನನ್ನ ಮಾಲೀಕತ್ವದ ವಾಹನ ಆಗಿರುತ್ತದೆ. ಈ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನ್ನ ಬಳಿ ಡಿ ಎಲ್ ಇರಲಿಲ್ಲ. ಎಲ್ ಎಲ್ ಹಾಜರುಪಡಿಸಿಲ್ಲ. ಅಪಘಾತ ದಿನದಂದು ಬೈಕ್ ಚಾಲನೆ ಮಾಡಲು ಯಾವುದೇ ಚಾಲನಾ ಪತ್ರ ಇರಲಿಲ್ಲ ಎಂದರೆ ಡಿ ಎಲ್ ಗೆ ಎಂದು ಹೋಗುವಾಗ ಅಪಘಾತ ಆಗಿತ್ತು.

3. ಗೌರಿಬಿದನೂರಿನಿಂದ ದೊಡ್ಡಬಳ್ಳಾಪುರ ಕಡೆಗೆ ಬರುತ್ತಿದ್ದೆ. ಕಾರ್ ನನ್ನ ಹಿಂದೆ ಗೌರಿಬಿದನೂರಿನಿಂದ ಬರುತ್ತಿತ್ತು. ಅಪಘಾತ ಸ್ಥಳ ಎನ್.ಎಚ್ ರಸ್ತೆ ಎಂದರೆ ಸರಿ. ರಸ್ತೆಯ ಮಧ್ಯಭಾಗದಲ್ಲಿ ಚಾಲನೆ ಮಾಡಿಕೊಂಡು ಹೋಗಿ ಕಾರಿಗೆ ನಾನೇ ಡಿಕ್ಕಿ ಮಾಡಿದ್ದು ನನ್ನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರ್ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುವುದಿಲ್ಲ . ಹೀಗಾಗಿ 2 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಅಪಘಾತ ವಿಷಯ ಯಾರು ತಿಳಿಸಿದ್ದರು ಎಂದು ಗೊತ್ತಿಲ್ಲ.

4. ಅಪಘಾತ ಆದ ನಂತರ ಸರ್ಕಾರಿ ಆಸ್ಪತ್ರೆ ದೊಡ್ಡಬಳ್ಳಾಪುರ ಬಿಟ್ಟು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಚಿಕಿತ್ಸೆಗಾಗಿ 70000 ರೂ ಹಣ ಖರ್ಚು ಮಡಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗಿಲ್ಲ , ಮೊದಲಿನ ಹಾಗೆ ಸರಿಯಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಾನು ಎಳನೀರು ವ್ಯಾಪರ ಮಾಡುತ್ತಿದ್ದೆ. ಈಗಲೂ ಕೂಡ ಅದೇ ವ್ಯಾಪಾರ

ಮಾಡುತ್ತಿದ್ದೇನೆಂದರೆ ಸರಿಯಲ್ಲ. ತಿಂಗಳಿಗೆ 30000 ರೂ ಸಂಬಳ ಗಳಿಸುತ್ತಿದ್ದೆ ಎಂಬುದಕ್ಕೆ ದಾಖಲೆ ಇಲ್ಲ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತ ದಿಂದ ನನಗೆ ಯಾವುದೇ ರೀತಿಯ ತೊಂದಗೆ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತ ಆಗಿದ್ದರೂ ಕೂಡ ಒಂದನೆ ಎದುರುದಾರರೊಂದಿಗೆ ಶಾಮೀಲಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

1 ನೇ ಎದುರುದಾರರು ಗೈರು ಹಾಜರಾಗಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಗಿದೆ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**